# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 577

ಸದಸ್ಯರ ಹೆಸರು : ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 09-03-2026

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಬೆಸ್ಕಾಂ ವಿಭಾಗದಲ್ಲಿ 2022 ರಿಂದ ಇಲ್ಲಿಯವರೆಗೆ ನೋಂದಣಿಯಾದ ಅಕ್ರಮ ಸಕ್ರಮ ಯೋಜನೆಯ ಅರ್ಜಿಗಳು ಎಷ್ಟು; ನೋಂದಣಿಯಾದ ಅರ್ಜಿಗಳಲ್ಲಿ ಎಷ್ಟು ಸಕ್ರಮ ಪಡಿಸಲಾಗಿದೆ; ಇನ್ನು ಅನೇಕ ಅರ್ಜಿಗಳು ಬಾಕಿ ಇರಲು ಕಾರಣ ಏನು; | • ರೈತರ ಪಂಪ್ ಸೆಟ್ ಗಳನ್ನು ಸಕ್ರಮಗೊಳಿಸಿ ವಿದ್ಯುತ್ ಮೂಲ ಸೌಕರ್ಯವನ್ನು ಕಲ್ಪಿಸುವ ಸಂಬಂಧ ಕರ್ನಾಟಕ ಸರ್ಕಾರವು 2005/2011/2014 ರಲ್ಲಿ ಆದೇಶ/ಸುತ್ತೋಲೆ ಯನ್ನು ಹೊರಡಿಸಿದ್ದು, ಇದರ ಪ್ರಕಾರ ಬೆ.ವಿ.ಕಂ ವ್ಯಾಪ್ತಿಯ ಹಿರಿಯೂರು ವಿಭಾಗದಲ್ಲಿ ಏಪ್ರಿಲ್-2022 ರ ಅಂತ್ಯಕ್ಕೆ 1507 ಸಂಖ್ಯೆಯ ಪಂಪ್ ಸೆಟ್ ಗಳಿಗೆ ವಿದ್ಯುಲ್ ಮೂಲ ಸೌಕರ್ಯ ರಚಿಸಲು ಬಾಕಿ ಇರುತ್ತದೆ. ಹಾಗೂ ಏಪ್ರಿಲ್-2022 ರಿಂದ ದಿನಾಂಕ:22.09.2023 ರ ವರೆಗೆ ರೈತರ ಪಂಪ್ ಸೆಟ್ ಗಳನ್ನು ಸಕ್ರಮಗೊಳಿಸಿ ವಿದ್ಯುತ್ ಮೂಲ ಸೌಕರ್ಯವನ್ನು ಕಲ್ಪಿಸುವ ಸಲುವಾಗಿ 2,552 ಸಂಖ್ಯೆಯ (ರೂ.10,000/- ಮತ್ತು ಇತರೆ ಶುಲ್ಕಗಳನ್ನು ಪಾವತಿಸುರುವ) ಅರ್ಜಿಗಳು ನೊಂದಣಿಗೊಂಡಿರುತ್ತದೆ.<br>• ದಿನಾಂಕ:22.09.2023 ರ ಮೊದಲು ರೂ.50/- ಮಾತ್ರ ಪಾವತಿಸಿ ನೊಂದಣಿಗೊಂಡು ದಿನಾಂಕ:22.09.2023 ರ ನಂತರ ದಲ್ಲಿ ರೂ.10,000/- ಹಾಗೂ ಇತರ ಠೇವಣಿ ಪಾವತಿಸಿರುವ ರೈತರುಗಳ ಸಂಖ್ಯೆ: 647 (ಜನವರಿ-2026 ರ ಅಂತ್ಯಕ್ಕೆ)<br>ಒಟ್ಟಾರೆ ಮೂಲಭೂತ ಸೌಕರ್ಯ ಕಲ್ಪಿಸಲು ಬಾಕಿ ಇರುವ ಪಂಪ್ ಸೆಟ್‌ಗಳ ಸಂಖ್ಯೆ: 4706<br>• ಏಪ್ರಿಲ್-2022 ರಿಂದ ಜನವರಿ-2026 ರ ಅಂತ್ಯಕ್ಕೆ 1,507 ಸಂಖ್ಯೆಯ ಪಂಪ್ ಸೆಟ್‌ಗಳಿಗೆ ಅಕ್ರಮ ಸಕ್ರಮ ಯೋಜನೆಯಡಿ ವಿದ್ಯುತ್ ಮೂಲಭೂತ ಸೌಕರ್ಯ ಕಲ್ಪಿಸಲಾಗಿರುತ್ತದೆ.<br>• ಬಾಕಿ ಇರುವ 3199 ಸಂಖ್ಯೆಯ (ರೂ.10,000/- ಹಾಗೂ ಇತರೆ ಶುಲ್ಕ ಪಾವತಿಸಿರುವ) ರೈತರುಗಳ ಪಂಪಸೆಟ್ ಗಳಿಗೆ ವಿದ್ಯುತ್ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿಗೆ ದಿನಾಂಕ:11.02.2026 ರಂದು ಟೆಂಡರ್ ಆಹ್ವಾನಿಸಲಾಗಿದ್ದು ಆರ್ಥಿಕ ವರ್ಷ 2026-27 ರಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು. |
| ಆ) | ಚಿತ್ರದುರ್ಗ ಜಿಲ್ಲೆ ಹಿರಿಯೂರು ಬೆಸ್ಕಾಂ ವಿಭಾಗದಲ್ಲಿ 2022 ರಿಂದ ಇದುವರೆಗೆ ಎಷ್ಟು ಶೀಘ್ರ ಸಂಪರ್ಕ ಯೋಜನೆಯ ಅರ್ಜಿಗಳಿಗೆ ಕಾಮಗಾರಿ ಪೂರ್ಣಗೊಳಿಸಲಾಗಿದೆ; ಈ ಕಾಮಗಾರಿಗಳಿಗೆ ಆದ ಒಟ್ಟು ವೆಚ್ಚ ಎಷ್ಟು; | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಹಿರಿಯೂರು ವಿಭಾಗದಲ್ಲಿ ಏಪ್ರಿಲ್-2022 ರಿಂದ ದಿನಾಂಕ:22.09.2023 ರ ವರೆಗೆ ಶೀಘ್ರ ಸಂಪರ್ಕ ಯೋಜನೆಯಡಿ 400 ಸಂಖ್ಯೆಯ ರೈತರುಗಳ ಪಂಪ್ ಸೆಟ್ ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಈ ಕಾಮಗಾರಿಗಳಿಗೆ ಬೆಸ್ಕಾಂನಿಂದ ಭರಿಸಿದ ಒಟ್ಟು ವೆಚ್ಚ ರೂ.3.518 ಕೋಟಿ ಗಳು.<br>ಮುಂದುವರೆದು, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಂಖ್ಯೆ:ಎನರ್ಜಿ/107/ವಿಎಸ್‌ಸಿ/2025 ದಿನಾಂಕ: 15.04.2025 ರನ್ವಯ "ನವೀಕೃತ ಶೀಘ್ರ ಸಂಪರ್ಕ ಯೋಜನೆಯಡಿ" ವಿದ್ಯುತ್ ಸಂಪರ್ಕವನ್ನು ಪಡೆಯಲು ಅವಕಾಶವನ್ನು ಕಲ್ಪಿಸಲಾಗಿದ್ದು, ಈ ಆದೇಶದನ್ವಯ ಹಿರಿಯೂರು ವಿಭಾಗದಲ್ಲಿ ಜನವರಿ-2026 ರ ಅಂತ್ಯಕ್ಕೆ 652 ಸಂಖ್ಯೆ ಯ ರೈತರುಗಳು "ನವೀಕೃತ ಶೀಘ್ರ ಸಂಪರ್ಕ ಯೋಜನೆಯಡಿ" ಅರ್ಜಿ ನೋಂದಾಯಿಸಿದ್ದು, HT / LT ಮಾರ್ಗ ವಿಸ್ತರಣೆ ಪೂರ್ಣಗೊಳಿಸಿರುವ 12 ಸಂಖ್ಯೆಯ ಪಂಪ್‌ಸೆಟ್‌ಗಳಿಗೆ ಬೆವಿಕಂಪನಿಯಿಂದ ಸೂಕ್ತ ಸಾಮರ್ಥ್ಯದ ಪರಿವರ್ತಕ (ಟಿ.ಸಿ) ಅನ್ನು ಎರಡು ಅಥವಾ ಹೆಚ್ಚಿನ ಸಂಖ್ಯೆಯ ಪಂಪ್ ಸೆಟ್‌ಗಳನ್ನು ಒಟ್ಟುಗೂಡಿಸಿ ವಿದ್ಯುತ್ ಸೌಕರ್ಯ ಕಲ್ಪಿಸಲಾಗಿರುತ್ತದೆ.<br>ಸದರಿ ಕಾಮಗಾರಿಗಳಿಗೆ ಬೆಸ್ಕಾಂನಿಂದ ಖರ್ಚು ಮಾಡಲಾದ ಒಟ್ಟು ವೆಚ್ಚ ರೂ.6.82/- ಲಕ್ಷಗಳು |

<table>
<tr><td></td><td></td><td>ಬಾಕಿ ಇರುವ 640 ಸಂಖ್ಯೆ ರೈತರುಗಳು HT/LT network ವಿಸ್ತರಣೆ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಸೂಕ್ತ ಸಾಮರ್ಥ್ಯದ ಪರಿವರ್ತಕವನ್ನು ಎರಡು ಅಥವಾ ಹೆಚ್ಚಿನ ಸಂಖ್ಯೆಯ ರೈತರ ಪಂಪ್ ಸೆಟ್ ಗಳನ್ನು ಒಟ್ಟುಗೂಡಿಸಿ ವಿದ್ಯುತ್ ಸಂಪರ್ಕವನ್ನು ನೀಡಲಾಗುವುದು.</td></tr>
<tr><td>ಇ)</td><td>ಚಿತ್ರದುರ್ಗ ಜಿಲ್ಲೆ ಹಿರಿಯೂರು ಬೆಸ್ಕಾಂ ವಿಭಾಗದಲ್ಲಿ 2022 ರಿಂದ ಇಲ್ಲಿಯವರೆಗೆ ಎಷ್ಟು ಕಂದಾಯ ವಸೂಲಿ ಮಾಡಲಾಗಿದೆ ಮತ್ತು ಸಾಮಾನ್ಯ ನಿರ್ವಹಣೆಯಲ್ಲಿ ಎಷ್ಟು ವೆಚ್ಚದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ; (ಸದರಿ ಕಾಮಗಾರಿಗಳ ಮಾಹಿತಿ ನೀಡುವುದು)</td><td>ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಚಿತ್ರದುರ್ಗ ಜಿಲ್ಲೆ ಹಿರಿಯೂರು ವಿಭಾಗದಲ್ಲಿ 2022 ರಿಂದ ಇಲ್ಲಿಯವರೆಗೆ ಮಾಡಲಾದ ಕಂದಾಯ ವಸೂಲಿ ಮಾಡಲಾದ ವಿವರಗಳು ಈ ಕೆಳಕಂಡಂತಿವೆ.
<table>
<tr><th>ಆರ್ಥಿಕ ವರ್ಷ</th><th>ವಸೂಲಾತಿ (ಕೋಟಿಗಳಲ್ಲಿ)</th></tr>
<tr><td>FY-2021-22</td><td>373.69</td></tr>
<tr><td>FY-2022-23</td><td>434.37</td></tr>
<tr><td>FY-2023-24</td><td>624.84</td></tr>
<tr><td>FY-2024-25</td><td>853.65</td></tr>
<tr><td>FY-2025-26 (ಜನವರಿ-26 ರ ವರೆಗೆ)</td><td>740.92</td></tr>
</table>
ಬೆಸ್ಕಾಂ ವತಿಯಿಂದ ಬಂಡವಾಳ ಕಾಮಗಾರಿಯಡಿ ಹಿರಿಯೂರು ವಿಭಾಗದ ವ್ಯಾಪ್ತಿಯಲ್ಲಿ ಕೈಗೊಂಡಿರುವ ಸಾಮಾನ್ಯ ನಿರ್ವಹಣೆಯ ಕಾಮಗಾರಿಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.</td></tr>
<tr><td>ಈ)</td><td>ಚಿತ್ರದುರ್ಗ ಜಿಲ್ಲೆ ಹಿರಿಯೂರು ಬೆಸ್ಕಾಂ ವಿಭಾಗದಲ್ಲಿ ರೈತರಿಗೆ ಪದೇ ಪದೇ ವಿದ್ಯುತ್ ಓವರ್‌ಲೋಡ್ ಆಗುತ್ತಿದ್ದು, ಇದಕ್ಕೆ ಸರ್ಕಾರದಿಂದ ತೆಗೆದುಕೊಂಡ ಕ್ರಮಗಳೇನು;</td><td>ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಹಿರಿಯೂರು ವಿಭಾಗದಲ್ಲಿ ಮಂಜೂರಾದ ವಿದ್ಯುತ್ ಹೊರೆಗೆ ತಕ್ಕಂತೆ ಪರಿವರ್ತಕಗಳನ್ನು ಅಳವಡಿಸಲಾಗುತ್ತದೆ. ಆದರೆ ಕೆಲವು ರೈತರು ಅಧಿಕ ಸಾಮರ್ಥ್ಯದ ಮೋಟಾರ್ ಗಳನ್ನು ಅಳವಡಿಸುವುದರಿಂದ ಹಾಗೂ ರೈತರು ಬೆಸ್ಕಾಂ ಗಮನಕ್ಕೆ ತರದೆ ಕೊಳವೆ ಬಾವಿ ಕೊರೆಸಿ ಪಂಪ್ ಸೆಟ್ಟುಗಳಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆಯುವುದರಿಂದ ಪರಿವರ್ತಕಗಳ ಹೊರೆ ಹೆಚ್ಚಾಗಿರುತ್ತದೆ.<br><br>ಹಾಲಿ ಇರುವ ಪರಿವರ್ತಕಗಳ ಮೇಲೆ ಅಧಿಕ ಹೊರೆ ಇದ್ದಲ್ಲಿ ಬಂಡವಾಳ ವೆಚ್ಚ (CAPEX) ಕಾಮಗಾರಿಯಡಿಯಲ್ಲಿ ಹಾಗೂ ವಿವಿಧ ಯೋಜನೆಗಳಯಡಿಯಲ್ಲಿ ಅಧಿಕ ಸಾಮರ್ಥ್ಯದ ಪರಿವರ್ತಕ ಅಥವಾ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲಾಗುತ್ತಿದೆ.<br><br>ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC) ನಿಯಮಾವಳಿಗಳ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ವಿಫಲಗೊಂಡ ಟ್ರಾನ್ಸ್ ಫಾರ್ಮರ್ ಗಳನ್ನು 72 ಗಂಟೆಗಳ ಒಳಗೆ ಮತ್ತು ನಗರ ಪ್ರದೇಶಗಳಲ್ಲಿ 24 ಗಂಟೆಗಳ ಒಳಗೆ ಬದಲಾಯಿಸಿ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಸಲು ಹಾಗೂ ತೊಂದರೆಯಾಗದಂತೆ ಬೆಸ್ಕಾಂ ವತಿಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು, ಬೆಸ್ಕಾಂ ವ್ಯಾಪ್ತಿಯಲ್ಲಿ 2025-26 ನೇ ಸಾಲಿನ ಜನವರಿ-2026 ರ ಅಂತ್ಯಕ್ಕೆ 30,763 ಸಂಖ್ಯೆಯ ಪರಿವರ್ತಕಗಳು ವಿಫಲಗೊಂಡಿದ್ದು, ಎಲ್ಲಾ ಪರಿವರ್ತಕಗಳನ್ನು ಬದಲಾಯಿಸಲಾಗಿರುತ್ತದೆ.<br><br>ಚಿತ್ರದುರ್ಗ ಜಿಲ್ಲೆಯ ಹಿರಿಯೂರು ವಿಭಾಗದಲ್ಲಿ 03 ಪರಿವರ್ತಕ ಬ್ಯಾಂಕ್ ಮತ್ತು ಒಂದು ವಿಭಾಗೀಯ ಉಗ್ರಾಣವಿದ್ದು, 31.01.2026ರ ಅಂತ್ಯಕ್ಕೆ ಒಟ್ಟಾರೆ 511 ಸಂಖ್ಯೆಯ ವಿವಿಧ ಸಾಮರ್ಥ್ಯದ ಹೊಸ/ದುರಸ್ತಿಗೊಂಡ ಪರಿವರ್ತಕಗಳನ್ನು ದಾಸ್ತಾನು ಇರಿಸಲಾಗಿದೆ.<br><br>ಮುಂದುವರಿದು, 2025-26 ನೇ ಸಾಲಿನ ಜನವರಿ 2026 ರವರೆಗೆ 2514 ಸಂಖ್ಯೆಯ ಪರಿವರ್ತಕಗಳು ವಿಫಲಗೊಂಡಿದ್ದು, ಸದರಿ ಪರಿವರ್ತಕಗಳನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (KERC) ನಿಯಮಾವಳಿಗಳ ಪ್ರಕಾರ ನಿಗದಿತ ಕಾಲಾವಧಿಯೊಳಗೆ ಬದಲಾಯಿಸಲಾಗಿದೆ.</td></tr>
</table>

| | | |
|---|---|---|
| ಉ) | ರೈತರ ಪರಿವರ್ತಕಗಳು ಪದೇ ಪದೇ ಸುಟ್ಟು ಹೋಗುತ್ತಿದ್ದು, ಇವುಗಳನ್ನು ಶೀಘ್ರದಲ್ಲಿ ಮರುಬಳಕೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ಮಾಹಿತಿ ನೀಡುವುದು) | ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (KERC) ನಿಯಮಾವಳಿಗಳ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು 72 ಗಂಟೆಗಳ ಒಳಗೆ ಮತ್ತು ನಗರ ಪ್ರದೇಶಗಳಲ್ಲಿ 24 ಗಂಟೆಗಳ ಒಳಗೆ ಬದಲಾಯಿಸಲು ಅನುಕೂಲವಾಗುವಂತೆ ಬೆಸ್ಕಾಂ ವ್ಯಾಪ್ತಿಯಲ್ಲಿ 50 ಸಂಖ್ಯೆ ದುರಸ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಹಾಗೂ ವಿಫಲಗೊಂಡ ಪರಿವರ್ತಕಗಳನ್ನು ತ್ವರಿತಗತಿಯಲ್ಲಿ ಬದಲಾಯಿಸಲು ಅನ್ವಯವಾಗುವಂತೆ 49 ಸಂಖ್ಯೆಯ ಪರಿವರ್ತಕ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗಿದ್ದು, ಆಯಾ ಪ್ರದೇಶದ ವಿಫಲತೆ ಪ್ರಮಾಣಕ್ಕನುಗುಣವಾಗಿ ಪರಿವರ್ತಕಗಳ ದಾಸ್ತಾನು ಹೊಂದಲು ಕ್ರಮ ವಹಿಸಲಾಗಿದ್ದು, ಜನವರಿ-26ರ ಅಂತ್ಯಕ್ಕೆ ಹೊಸ / ದುರಸ್ತಿಗೊಂಡ ಪರಿವರ್ತಕಗಳು ಸೇರಿದಂತೆ ವಿವಿಧ ಸಾಮರ್ಥ್ಯದ 8,112 ಸಂಖ್ಯೆ ಪರಿವರ್ತಕಗಳ ದಾಸ್ತಾನಿರಿಸಲಾಗಿದೆ. |

ಸಂಖ್ಯೆ: ಎನರ್ಜಿ 39 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ)**
**ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 577 ಕ್ಕೆ ಅನುಬಂಧ-1**

**ಸಾಮಾನ್ಯ ನಿರ್ವಹಣೆಯ ಕಾಮಗಾರಿಗಳ ಮಾಹಿತಿಯ ವಿವರಗಳು**

| ವಿಭಾಗ | ಆರ್ಥಿಕ ವರ್ಷ | 74.1167(ಪರಿವರ್ತಕಗಳ ನಿರ್ವಹಣೆ) | | | 74.5107(ಸಾಮಾನ್ಯ ತಾಂತ್ರಿಕ ದುರಸ್ತಿ ನಿರ್ವಹಣೆ) | | |
|---|---|---|---|---|---|---|---|
| | | ಮಂಜೂರಾದ ಬಜೆಟ್ | ಕಾಮಗಾರಿಗಳ ಸಂಖ್ಯೆ | ಭರಿಸಿದ ವೆಚ್ಚ | ಮಂಜೂರಾದ ಬಜೆಟ್ | ಕಾಮಗಾರಿಗಳ ಸಂಖ್ಯೆ | ಭರಿಸಿದ ವೆಚ್ಚ |
| ಹಿರಿಯೂರು | 2021-22 | 459.2 | 121 | 454.84 | 244.94 | 146 | 86.77 |
| | 2022-23 | 473.45 | 123 | 473.44 | 93.65 | 152 | 93.64 |
| | 2023-24 | 582.42 | 121 | 582.38 | 482.42 | 251 | 462.72 |
| | 2024-25 | 1313.92 | 108 | 1227.4 | 381.34 | 205 | 376.22 |
| | 2025-26 (ಜನವರಿ-2026 ಅಂತ್ಯಕ್ಕೆ) | 1012.57 | 59 | 753.19 | 320.38 | 481 | 132.62 |